# ವಿಶೇಷ ಉಪನ್ಯಾಸ ಮಾಲೆ 2017–18
## ಕನ್ನಡ ವಿಭಾಗ
## ರಾಘವಂಕ ಕವಿಯ ಹರಿಶ್ಚಂದ್ರ ಕಾವ್ಯದ "ಚಂದ್ರಮತಿಯ ಪ್ರಲಾಪ"
12-10-2017




ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ದಿನಾಂಕ 12–10–2017 ರ ಗುರುವಾರ ಕನ್ನಡ ವಿಭಾಗದ ವತಿಯಿಂದ ನಡುಗನ್ನಡ ಸಾಹಿತ್ಯದ ಷಟ್ಪದಿಬ್ರಹ್ಮ ರಾಘವಾಂಕ ಮಹಾಕವಿಯ ಹರಿಶ್ಚಂದ್ರ ಕಾವ್ಯದ **"ಚಂದ್ರಮತಿಯ ಪ್ರಲಾಪ"** ವಿಷಯ ಕುರಿತು ವಿಶೇಷ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.

ಮೈಸೂರಿನ ವಿಜಯನಗರದ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸ್ನಾತಕೊತ್ತರ ವಿಭಾಗದ ಮುಖ್ಯಸ್ಥರು ಹಾಗೂ ಸಂಸ್ಕೃತಿ ಚಿಂತಕರಾದ ಡಾ.ಪಿ.ಬೆಟ್ಟೇಗೌಡ ಅವರು ಪ್ರಸ್ತುತ ಉಪನ್ಯಾಸವನ್ನು ನಡೆಸಿಕೊಟ್ಟರು. ದ್ವಿತೀಯ ಬಿ.ಕಾಂ, ಬಿ.ಬಿ.ಎ.ವಿದ್ಯಾರ್ಥಿಗಳಿಗೆ ಈ ವಿಷಯವು ಪಠ್ಯವಾಗಿದ್ದು ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾದ ಉಪನ್ಯಾಸವಾಗಿತ್ತು. ದೇವಲೋಕದಲ್ಲಿ ವಿಶ್ವಾಮಿತ್ರ, ವಸಿಷ್ಠರ ಚರ್ಚೆ ಮತ್ತು ವಾದದ ಪ್ರತಿಫಲವಾಗಿ ಭೂಲೋಕದಲ್ಲಿ ಹರಿಶ್ಚಂದ್ರನು ನಾನಾ ಕಷ್ಟ ಮತ್ತು ಯಾತನೆಗಳನ್ನು ಅನುಭವಿಸಬೇಕಾಗಿ ಬಂದಿತು. ಆದರೆ ವಿಶ್ವಾಮಿತ್ರನ ಪರೀಕ್ಷೆಗಳ ಕಾರಣದಿಂದ ರಾಜ ಹರಿಶ್ಚಂದ್ರ ಸತ್ಯ ಹರಿಶ್ಚಂದ್ರನಾಗಿ ಜಗತ್ತಿಗೆ ಪರಿಚಿತನಾದ.





ಇದನ್ನು ವಿದ್ಯಾರ್ಥಿಗಳಿಗೆ ಮನ ಮುಟ್ಟುವಂತೆ ಪರಿಣಾಮಕಾರಿ ನೆಲೆಯಲ್ಲಿ ಕಟ್ಟಿಕೊಟ್ಟರು ಹಾಗೂ ಚಂದ್ರಮತಿಯ ಪ್ರಲಾಪ ಭಾಗದಲ್ಲಿನ ತಾಯಿ ಮಗುವಿನ ಕರುಳ ಬಳ್ಳಿಯ ಸಂಬಂಧವನ್ನು ಶೋಕ ಮತ್ತು ಕರುಣಾರಸ ಪ್ರಧಾನವಾದ ಸನ್ನಿವೇಶವನ್ನು ಕೇಳುಗರ ಕಣ್ಣಾಲಿಗಳಲ್ಲಿ ನೀರಾಡುವಂತೆ ಗಂಭೀರ ಚಿಂತನೆಗಳ ಮೂಲಕ ಮನಕಲಕುವ ಉಪನ್ಯಾಸ ನೀಡುವುದರ ಜೊತೆಗೆ ಜಗತ್ತಿನಲ್ಲಿ

ರಾಘವಾಂಕನ ಹರಿಶ್ಚಂದ್ರ ಕಾವ್ಯಕ್ಕೆ ಇರುವ ಮಹತ್ವವನ್ನು ತಿಳಿಸಿಕೊಟ್ಟರು. "ಹರನೆಂಬುದೆ ಸತ್ಯ ಸತ್ಯನೆಂಬುದೆ ಹರನು" ಎಂಬ ಮಾತನ್ನು ರಾಘವಾಂಕ ಪ್ರಸ್ತುತ ಕಾವ್ಯದಲ್ಲಿ ಸತ್ಯಶೋಧನೆಯ ಹಿನ್ನಲೆಯಲ್ಲಿ ಸತ್ಯ ದರ್ಶನವನ್ನು ಹೇಗೆ ಮಾಡಿಸಿದ್ದಾನೆಂಬ ಅಂಶಗಳನ್ನು ತಮ್ಮ ಉಪನ್ಯಾಸದಲ್ಲಿ ಕಟ್ಟಿಕೊಟ್ಟರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡರು ಅಧ್ಯಕ್ಷತೆಯನ್ನು ವಹಿಸಿದ್ದು ಸಾಹಿತ್ಯದ ಹಿರಿಮೆ ಗರಿಮೆಗಳ ಬಗ್ಗೆ ತಿಳಿಸಿಕೊಟ್ಟರು.




ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ.ಧನಂಜಯ ಪಾಲಹಳ್ಳಿ ಅವರು ಉಪಸ್ಥಿತರಿದ್ದು ಎಲ್ಲರನ್ನು ಸ್ವಾಗತಿಸಿದರು. ಕನ್ನಡ ಸಹಾಯಕ ಪ್ರಾಧ್ಯಾಪಕರಾದ ಪ್ರೊ.ಮಂಜು,ಜೆ ಅವರು ಕಾರ್ಯಕ್ರಮದ ಪ್ರಾರಂಭದಲ್ಲಿ ಹರಿಶ್ಚಂದ್ರ ಕಾವ್ಯದ ಷಟ್ಪದಿಗಳನ್ನು ಗಮಕ ಶೈಲಿಯಲ್ಲಿ ವಾಚನ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಹಾಗೂ ಸರ್ವರನ್ನು ವಂದಿಸಿದರು.




ಕನ್ನಡ ಸಹಾಯಕ ಪ್ರಾಧ್ಯಾಪಕರಾದ ಡಾ.ಟಿ.ಶ್ರೀನಿವಾಸರವರು ಕಾರ್ಯಕ್ರಮವನ್ನು ನಿರೂಪಿಸಿದರು.ದ್ವಿತೀಯ ಬಿ.ಕಾಂ, ಬಿ.ಬಿ.ಎ ವಿಭಾಗದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದು ವಿಶೇಷ ಉಪನ್ಯಾಸದ ಪ್ರಯೋಜನವನ್ನು ಪಡೆದುಕೊಂಡರು.